ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ತಾಲ್ಲೂಕಿನಲ್ಲಿ ಮಣ್ಣೆ ಗ್ರಾಮದಿಂದ ಬರಗೂರುವರೆಗೆ ರಸ್ತೆ ದುರಸ್ತಿ ಇಲ್ಲದ ಕಾರಣ ಬಸ್ಸುಗಳು ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಸ್ತೆ ಕೆಲಸ ತ್ವರಿತವಾಗಿ ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಜಿಲ್ಲಾಪರಿಷತ್‌ನಿಂದ ಇತ್ತೀಚೆಗೆ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ಈ ರಸ್ತೆಯ ಕೆಲವು ಭಾಗಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ತುರ್ತು ದುರಸ್ತಿ ಅವಶ್ಯವಿರುವ ರಸ್ತೆಯ ಭಾಗಗಳನ್ನು ಲಭ್ಯವಿರುವ ನಿರ್ವಹಣಾ ಅನುದಾನದಲ್ಲಿ ಸುಸ್ಥಿತಿಯಲ್ಲಿಡಲು ಕ್ರಮ ತೆಗೆದುಕೊಳ್ಳಲಾಗಿದೆ. ಅಭಿವೃದ್ಧಿಯನ್ನು ಹಂತ ಹಂತವಾಗಿ 1993–94ನೇ ಸಾಲಿನಿಂದ ತೆಗೆದುಕೊಳ್ಳಲಾಗುವುದು.

ಕೊರಟಗೆರೆ ಮುನ್ಸೀಫ್ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ

1194 (1104): ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):–

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ ಮುನ್ಸೀಫ್ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಮುನ್ಸೀಫ್ ನ್ಯಾಯಾಲಯದ ಕಟ್ಟಡಕ್ಕೆ ತಾಲ್ಲೂಕು ಕಛೇರಿ ಬಳಿ ಸರ್ಕಾರ ಸ್ಥಳವನ್ನು ಕೊಟ್ಟಿದ್ದರೂ ಕೆಲಸ ತೆಗೆದುಕೊಳ್ಳದಿರಲು ಕಾರಣಗಳೇನು;

ಇ) ಕಟ್ಟಡ ತ್ವರಿತವಾಗಿ ಪ್ರಾರಂಭಿಸಲು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ಹೌದು.

ಆ) ತಾಲ್ಲೂಕು ಕಛೇರಿ ಬಳಿ ಇರುವ ಜಾಗವನ್ನು ಕಟ್ಟಡದ ಸಲುವಾಗಿ ತೆಗೆದುಕೊಂಡಿಲ್ಲ. ಜಾಗ ಕಟ್ಟಡಕ್ಕೆ ಸಾಲದು. ಸೂಕ್ತ ಜಾಗವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಇ) ಸೂಕ್ತ ನಿವೇಶನ ದೊರಕಿದ ಕೂಡಲೆ ಕ್ರಮ ತೆಗೆದುಕೊಳ್ಳಲಾಗುವುದು.

ನಿಪ್ಪಾಣಿಯಿಂದ ಇಚಲಕರಂಜಿವರೆಗಿನ ರಸ್ತೆಯ ದುರಸ್ತಿ

1196 (2019): ಶ್ರೀ ಸುಭಾಷ್ ಎಸ್. ಜೋಶಿ (ನಿಪ್ಪಾಣಿ):–

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಿಪ್ಪಾಣಿಯಿಂದ ಇಚಲಕರಂಜಿ ಮಹಾರಾಷ್ಟ್ರ ಹದ್ದಿಯವರೆಗಿನ ರಸ್ತೆಯ ಸ್ಥಿತಿ ತೀರಾ ಕೆಟ್ಟಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಸರ್ಕಾರ ಸದರಿ ರಸ್ತೆಯ ಸ್ಥಿತಿಗತಿಯನ್ನು ಸುಧಾರಿಸಲು ಏನಾದರೂ ಯೋಚಿಸಿದೆಯೇ;

ಇ) ರಸ್ತೆಯ ದುರಸ್ತಿಯನ್ನು ಯಾವಾಗ ಮಾಡಿ ಪೂರೈಸಲಾಗುವುದು.

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) 37.20 ಕಿ.ಮೀ. ಉದ್ದದ ಈ ರಸ್ತೆಯು ಮುಖ್ಯ ಜಿಲ್ಲಾ ರಸ್ತೆಯಾಗಿದ್ದು ಸಂಪೂರ್ಣ ಉದ್ದಕ್ಕೆ ಡಾಂಬರಿನ ರಸ್ತೆಯಾಗಿದೆ. ವಾಹನ ಸಂಚಾರಕ್ಕೆ ಅನುಕೂಲವಾಗಿದ್ದು ರಸ್ತೆ ಕಟ್ಟಿರುವುದಿಲ್ಲ. ಮರು ಡಾಂಬರೀಕರಣದ ಅಪಶ್ಯಕತೆ ಇದೆ.

ಆ) 1993-94ನೇ ಸಾಲಿನಿಂದ ಆಯ್ದ ಭಾಗಗಳ ಮರು ಡಾಂಬರೀಕರಣವನ್ನು ಸಂಚಾರ ದಟ್ಟಣೆ ಅಗತ್ಯಕ್ಕೆ ಅನುಗುಣವಾಗಿ ಹಾಗೂ ಅನುದಾನ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ತೆಗೆದುಕೊಳ್ಳಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಪಿ.ಡಬ್ಲ್ಯೂ.ಡಿ. ಹಾಗೂ ಹೆಚ್.ಕೆ.ಡಿ.ಬಿ. ಉಪ ವಿಭಾಗಗಳು

1198 (2006): ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):-

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ (ಪಿಡಬ್ಲ್ಯೂಡಿ) ಉಪವಿಭಾಗಗಳು ಹಾಗೂ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಉಪವಿಭಾಗಗಳು ಎಷ್ಟು; (ಇವುಗಳ ಕೇಂದ್ರ ಕಛೇರಿಗಳು ಎಲ್ಲೆಲ್ಲಿವೆ ಎನ್ನುವುದು ವಿಳಾಸದೊಂದಿಗೆ ತಿಳಿಸುವುದು);

ಆ) ಪಿಡಬ್ಲ್ಯೂಡಿ ಹಾಗೂ ಹೆಚ್‌ಕೆಡಿಬಿ ಇವೆರಡು ಉಪವಿಭಾಗಗಳೂ ಒಂದೇ ಕಡೆ ಇರಲಿಕ್ಕೆ ಕಾರಣಗಳೇನು, ಇವುಗಳನ್ನು ತೆಗೆದುಹಾಕಿ ಬೇರೆ ತಾಲ್ಲೂಕಿಗೆ ಸ್ಥಳಾಂತರಿಸಲಿಕ್ಕೆ ಯಾವ ತೊಂದರೆ ಇದೆ;

ಇ) ಎರಡೂ ಒಂದೇ ಕಡೆ ಇರುವುದರಿಂದ ಬೇರೆ ತಾಲ್ಲೂಕಿನ ಕೆಲಸಗಳ ಅಭಿವೃದ್ಧಿಗಳು ಆಗುತ್ತಿಲ್ಲ.

ಈ) ಇವುಗಳನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾಯಿಸಿದರೆ ತಾಲ್ಲೂಕು ಅಭಿವೃದ್ಧಿ ಆಗುತ್ತದೆ; ಇದಕ್ಕೆ ಸರ್ಕಾರದ ನಿಲುವು ಏನು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 5 ಲೋಕೋಪಯೋಗಿ ಇಲಾಖೆಯ ಉಪವಿಭಾಗಗಳು ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾಮಗಾರಿಯ 3 ಉಪವಿಭಾಗಗಳು ಒಟ್ಟು 8 ಉಪವಿಭಾಗಗಳು ಇವೆ. ಅವುಗಳು ಈ ಕೆಳಗಿನಂತೆ ಇವೆ.